ಅಧ್ಯಕ್ಷರು : ನಾನು ಮಾನ್ಯ ರವಿಯವರ ಹೆಸರನ್ನು ಕರೆದಿದ್ದೇನೆ. ಉಳಿದವರೆಲ್ಲರೂ ಎದ್ದು ನಿಂತುಕೊಂಡರೆ ಏನು ಮಾಡುವುದು ಯಡಿಯೂರಪ್ಪನವರೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತಾ ಸಾರ್, ನೀವು ಏನು ಮಾಡುವುದಕ್ಕಾಗುವುದಿಲ್ಲ. ನಾವು ಸಹಕಾರವನ್ನು ಕೊಡದೆ ಇದ್ದರೆ ಎಲ್ಲರೂ ಎದ್ದು ನಿಂತುಕೊಂಡರೆ ತಾವು ಏನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ರವಿಯವರೆ, ತಾವು ಮಾತನಾಡಿ.

2. 2003ನೇ ಸಾಲಿನ ಮಹಾಲೇಖಪಾಲರ ವರದಿಯಲ್ಲಿ ಕುದುರೆಮುಖ ಅದಿರು ಕಂಪನಿಯು 139 ಕೋಟಿ ರೂ.ಗಳನ್ನು ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿದೆ ಎಂದು ಉಲ್ಲೇಖವಾಗಿರುವ ಬಗ್ಗೆ

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಅತಿ ಮುಖ್ಯವಾದ ವಿಚಾರವೊಂದನ್ನು ಪ್ರಸ್ತಾಪ ಮಾಡುವ ಬಗ್ಗೆ ಶೂನ್ಯ ವೇಳೆಯಲ್ಲಿ ತಾವು ಅವಕಾಶವನ್ನು ಮಾಡಿಕೊಟ್ಟಿದಕ್ಕಾಗಿ ತಮಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. 2003ರ ಮಹಾಲೇಖಪಾಲರ ವರದಿಯಲ್ಲಿ ಕುದುರೆಮುಖ ಅದಿರು ಕಂಪನಿ 139 ಕೋಟಿ ರೂಪಾಯಿಗಳನ್ನು ಇವತ್ತು ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿದೆ ಎಂಬುದು ವರದಿಯಲ್ಲಿ ಉಲ್ಲೇಖವಾಗಿದೆ. ಆ ಬಾಕಿಯನ್ನು ವಸೂಲು ಮಾಡುವ ಬಗ್ಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ ಎಂಬುದರ ಬಗ್ಗೆ ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಹಾಗೆಯೇ ಇವತ್ತು ತಮ್ಮ ಭಾಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಳೆಯಾಗುತ್ತಿದೆ. ಇವತ್ತು ಭದ್ರಾ ಮತ್ತು ತುಂಗಾ ನದಿಗಳು ಕುದುರೆಮುಖ ವ್ಯಾಪ್ತಿಯಿಂದ ಹರಿದು ಬರತಕ್ಕಂತಹ ಹೊಳೆಯನ್ನು ತಾವು ಬಂದು ನೋಡಬೇಕು, ಅಥವಾ ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಬೇಕು. ಇವತ್ತಿನದಿವಸ ಬಹಳ ದೊಡ್ಡ ಪ್ರಮಾಣದಲ್ಲಿ ಕುದುರೆಮುಖ ಗಣಿಗಾರಿಕೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ಹೂಳು ಇವತ್ತು ಆ ಹೊಳೆಯಲ್ಲಿ ಸೇರಿಹೋಗುತ್ತಿದೆ. ಇದರಿಂದಾಗಿ ನೀರನ್ನು ಸ್ಟೋರೇಜ್ ಮಾಡತಕ್ಕಂತಹ ಅಣೆಕಟ್ಟುಗಳು ಹೂಳನಿಂದ ಬಹಳ ಬೇಗ ಅವು ತುಂಬಿ ಹೋಗುತ್ತಿದೆ. ಇಷ್ಟು ಮಾತ್ರವಲ್ಲ ಏನು ನೀರಾವರಿ ಪ್ರದೇಶದ ಜಮೀನಿನಲ್ಲಿಯೂ ಕೂಡ ಆ ಕುದುರೆಮುಖ ಅದಿರು ಕಂಪನಿಯಿಂದ ಸೋರಿಹೋಗುವಂತಹ ಕಬ್ಬಿಣದ ಸರಿ ತುಂಬಿ ಕೊಂಡು ನಮ್ಮ ಆ ಫಲವತ್ತಾಗಿರುವಂತಹ ಭೂಮಿ ಇವತ್ತು ಏತಕ್ಕೂ ಉಪಯೋಗವಾಗದಿರುವಂತಹ ಸ್ಥಿತಿಗೆ ಮುಟ್ಟಿದೆ. ಈ ಹಿನ್ನೆಲೆಯಲ್ಲಿ ತಾವು ಭಾರೀ ಪ್ರಮಾಣದ ಹೂಳನ್ನು ತಡೆಯುವುದಕ್ಕೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತಿದೆ? ಇದರಿಂದಾಗಿ ರೈತರಿಗೆ ಆಗುತ್ತಿರುವಂತಹ ನಷ್ಟವನ್ನು ತಪ್ಪಿಸುವ ಬಗ್ಗೆ ಏನು ಯೋಚನೆಯನ್ನು ಮಾಡಿದೆ. ಈ ಎಲ್ಲಾ ಸತ್ಯಸಂಗತಿಗಳನ್ನು ಚಿತ್ರಸಹಿತವಾಗಿ ವರದಿ ಮಾಡಿರುವಂತಹ ವರದಿಗಾರರಿಗೆ ಮತ್ತು ಪರಿಸರ ಪ್ರೇಮಿಗಳ ಮೇಲೆ ಅಲ್ಲಿರುವಂತಹ ಡಿ.ಸಿ.ಎಫ್. ಮೂರು-ನಾಲ್ಕು ಸುಳ್ಳು ಮೊಕದ್ದಮ್ಮೆಗಳನ್ನು ಹಾಕಿ ಅವರ ಬಾಯಿಯನ್ನು ಮುಚ್ಚಿಸುವಂತಹ ಹೀನಸವನ್ನು ಮಾಡುತ್ತಿದ್ದಾರೆ. ಈ 139 ಕೋಟಿ ರೂಪಾಯಿಗಳ ಬಾಕಿ ವಸೂಲಿಯ ಬಗ್ಗೆಯಾಗಲಿ,....

ಅಧ್ಯಕ್ಷರು : ಮಾನ್ಯ ಸದಸ್ಯರೆ, ತಾವು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ರವಿಯವರೆ, ಒಂದು ನಿಮಿಷ ತಾಳಿ, ಮಾನ್ಯ ಅಧ್ಯಕ್ಷರೆ, ತಾವು ತಪ್ಪುತಿಳಿದುಕೊಳ್ಳದೆ ಹೋದರೆ, ಈ ಸರ್ಕಾರದ ಮಂತ್ರಿಗಳು ಯಾರು ಇರುತ್ತಾರೆ ಅವರ ಪೈಕಿ ಯಾರಾದರೂ ಒಬ್ಬರು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಿದಾಗ ಗಮನ ಹರಿಸಬೇಕಾಗುತ್ತಿದೆ 100ಕ್ಕೆ 70 ಭಾಗ ಮುಂಚೆಯೇ ನೋಟಿಸ್ ಕೊಟ್ಟಿದ್ದರೆ ಅದಕ್ಕೆ ಉತ್ತರ ಕೊಟ್ಟಿರುವ ಬಗ್ಗೆ ಅನೇಕ ದಾಖಲೆಗಳು ಇವೆ. ಇದು ಇಲ್ಲಿ ನಡೆದುಕೊಂಡು ಬಂದಿರುವಂತಹ ಪದ್ಧತಿಯಾಗಿದೆ. ಅಥವಾ ಅದರ ಬಗ್ಗೆ ಯಾರಾದರೂ ಪೂರ್ಣ ಗಮನವನ್ನು ತೆಗೆದುಕೊಂಡು ಇಲ್ಲಿ ಸದನದಲ್ಲಿ ಉತ್ತರವನ್ನು ಕೊಡುವುದು ಇದ್ದರೆ ಉತ್ತರವನ್ನು ಕೊಟ್ಟಿದ್ದು ಉಂಟು. ಬೇರೆ ಸಂದರ್ಭಗಳಲ್ಲಿ ಪ್ರಮುಖವಾಗಿದ್ದರೆ ಅದರ ಬಗ್ಗೆ ಬೇಕಾದಂತಹ ದಾಖಲೆಗಳನ್ನು ತರಿಸಿಕೊಂಡು ಉತ್ತರ ಕೊಡುವುದುಂಟು. ಆದರೆ ಇಲ್ಲಿ ಯಾರೋಬ್ಬರೂ ಕೂಡ ಗಮನವನ್ನು ಕೊಡುವುದಿಲ್ಲವಲ್ಲಾ? ಅವರು ಒಂದು ವರದಿಯನ್ನು ಒಪ್ಪಿಸುವಂತಹ ರೀತಿಯಲ್ಲಿ ಸದನದಲ್ಲಿ ವರದಿಯನ್ನು ಒಪ್ಪಿಸಬೇಕು, ಆಮೇಲೆ ನೋಡೋಣ, ಸದನ ಮುಗಿಯಲಿ ಎನ್ನುವ ರೀತಿಯಲ್ಲಿ ಚರ್ಚೆಯಾಗುವುದಾಗಿದ್ದರೆ, ವಿಷಯ ಅದರ ಮಹತ್ವವನ್ನು ಕಳೆದುಕೊಳ್ಳುತ್ತದೆ. ಜವಾಬ್ದಾರಿಯುತವಾದ ಶಾಸಕರು ಅಪರೂಪಕ್ಕೆ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರಾಜ್ಯದ ಜನತೆಗೆ ಸಂಬಂಧಪಟ್ಟಂಥ ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಯಾರಾದರೊಬ್ಬರು ಇದರ ಬಗ್ಗೆ ಗಮನವನ್ನು ಕೊಟ್ಟು ಉತ್ತರವನ್ನು ಪ್ರಯತ್ನ ಮಾಡದೆ ಹೋದರೆ ಹೇಗೆ?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಎಲ್ಲಾ ಮಾನ್ಯ ಸದಸ್ಯರುಗಳು ಎತ್ತಿರತಕ್ಕಂತಹ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದೇವೆ. ನೀವು ಪ್ರಶ್ನೆಯನ್ನು ಎತ್ತಿದ ತಕ್ಷಣ ಎಲ್ಲದಕ್ಕೂ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ. ಇವತ್ತಿನ ಒಳಗಡೆ ಅಥವಾ ನಾಳೆಯ ದಿವಸ ಅವರು ಏನೇನು ಸಮಸ್ಯೆಗಳನ್ನು ಎತ್ತಿದ್ದಾರೆ ಅದಕ್ಕೆಲ್ಲ ಅವರಿಗೆ ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಬಹುಶಃ ಎರಡು–ಮೂರು ದಿವಸಕ್ಕೆ ಮುಂಚಿತವಾಗಿ ನಾವು ಮಾನ್ಯ ಅಧ್ಯಕ್ಷರಿಗೆ ಸೂಚನೆಯನ್ನು ಕೊಟ್ಟಿರುತ್ತೇವೆ. ಬಹುಶಃ ಅವರು ಇದರ ಬಗ್ಗೆ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಒಂದು ಉತ್ತರವನ್ನು ಕೊಡದೆ ಒಂದು ಸಾಮಾನ್ಯವಾದ ಸ್ಟೇಟ್‌ಮೆಂಟ್‌ನ್ನು ಮಾಡದೆ ಹೋದರೆ ಹೇಗೆ?

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಸಿ.ಟಿ. ರವಿ : ನಾನು ಈಗ 2ನೇ ತಾರೀಖು ಮಾನ್ಯ ಅಧ್ಯಕ್ಷರಿಗೆ ಕೇಳಿದ್ದೇನೆ. ಇದು ಅಲ್ಲದೆಯೇ ನೋಟಿಫೈ ಆಗದೆ ಇರತಕ್ಕಂತಹ ಅಭಯಾರಣ್ಯದ ವ್ಯಾಪ್ತಿಯೊಳಗಡೆಯೂ ಕೂಡ ಗಣಿಗಾರಿಕೆಯನ್ನು ಮಾಡಿ ನದಿಯ ಮೂಲಕ್ಕೆ ಕುತ್ತು ತರುವಂತಹ ಕೆಲಸ ನಡೆಯುತ್ತಿದೆ. ಬಹುಃಶ ಭದ್ರೆಯೇ ಮುಂದೊಂದು ದಿನ ಬತ್ತಿಹೋಗಬಹುದು. ಆಗ ಈ ಕೃಷ್ಣಗೆ ನೀರು ಬರತಕ್ಕಂತಹದ್ದು ನಿಂತುಹೋಗುತ್ತದೆ, ಅದನ್ನು ಅವಲಂಬಿತವಾಗಿರುವಂತಹ ನೀರಾವರಿ ಪ್ರದೇಶಗಳೂ ಕೂಡ ವಿಜಯನಗರದ ಹಳೆಯ ಕಥೆಯನ್ನು ಹೇಳುವಂತಹ ಸ್ಥಿತಿಗೆ ಬಂದುಬಿಡುತ್ತದೆ. ಹಾಗಾಗಬಾರದೆಂದರೆ, ಈ ಬಗ್ಗೆ ಸೂಕ್ತವಾದಂತಹ ತನಿಖೆ ನಡೆಸಬೇಕು; ಇದರೊಳಗೆ ಸಾಕಷ್ಟು. ವಿವರಗಳು ಇದೆ, ಅಧ್ಯಕ್ಷರು ತಾವು ಅನುಮತಿ ಕೊಟ್ಟರೆ, ನನ್ನ ಹತ್ತಿರ ಸಾಕಷ್ಟು ವಿವರಗಳು ಇವೆ. ನನಗೆ ಶೂನ್ಯವೇಳೆಯಲ್ಲಿ ಬೆಳಕನ್ನು ಚೆಲ್ಲುವುದಕ್ಕೆ ಸಮಯ ಸಾಕಾಗುವುದಿಲ್ಲ.

ಅಧ್ಯಕ್ಷರು : ರವಿಯವರೆ, ನಿಮ್ಮ ಹತ್ತಿರ ಅನೇಕ ದಾಖಲಾತಿಗಳು ಇವೆ. ವಿಷಯವನ್ನು ತಾವು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಅವುಗಳ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಬಂಧಪಟ್ಟಂತಹ ಸಚಿವರಿಗೆ ಕೊಡಿ. ಅವರು ಉತ್ತರವನ್ನು ಕಳುಹಿಸುತ್ತಾರೆ. ಈಗ ಸಚಿವರು ಮಾತನಾಡುತ್ತಾರೆ. ಕುದುರೆಮುಖದಲ್ಲಿ ಗಣಿಗಾರಿಕೆ ನಡೆಯುತ್ತಿದೆ, ಅದರ ಬಗ್ಗೆ ಹೇಳಿ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ಉತ್ತರವನ್ನು ಒದಗಿಸಿಕೊಡಲಾಗುವುದು. ಅದರ ಬಗ್ಗೆ ಮಾನ್ಯ ರವಿಯವರು ತಮ್ಮ ಹತ್ತಿರ ಇರುವ ದಾಖಲಾತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ಯಾರ ಹೆಸರನ್ನು ಕರೆಯುತ್ತಾರೋ ಅವರು ಮಾತನಾಡಿ.

ಅಧ್ಯಕ್ಷರು : ಈಗ ಮಾನ್ಯ ಅಲ್ಲೋಡು ಹನುಮಂತಪ್ಪನವರು ಮಾತನಾಡಿ.

3. ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ವಿವಿಧ ಇಲಾಖೆಗಳಲ್ಲಿ ಸುಮಾರು 385 ಹುದ್ದೆಗಳು ಖಾಲಿ ಇರುವುದರ ಬಗ್ಗೆ

ಶ್ರೀ ಅಲ್ಲೋಡು ಹನುಮಂತಪ್ಪ(ದೇವದುರ್ಗ) : ಮಾನ್ಯ ಅಧ್ಯಕ್ಷರೆ, ನನಗೆ ತಾವು ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ತಮಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ರಾಯಚೂರು ಜಿಲ್ಲೆಯ ನನ್ನ ಮತಕ್ಷೇತ್ರವಾದ ದೇವದುರ್ಗ ತಾಲ್ಲೂಕು ಬಹಳ ದೊಡ್ಡ ಹೆಸರನ್ನು ಪಡೆದಿದೆ ಎಲ್ಲಾ ತಾಲ್ಲೂಕುಗಳು ಅಭಿವೃದ್ಧಿಯತ್ತ ತನ್ನ ಹೆಸರನ್ನು ಪಡೆದುಕೊಂಡಿದ್ದರೆ; ನನ್ನ ತಾಲ್ಲೂಕು ಇಡೀ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ದೇಶದಲ್ಲಿ ಭಾರತ ಏಷ್ಯ ಖಂಡದಲ್ಲಿ ಬಹಳ ಹಿಂದುಳಿದಿರುವಂತಹ ತಾಲ್ಲೂಕು ಎಂದು ಸರ್ಕಾರದ ಎಲ್ಲಾ ಪುಸ್ತಕಗಳಲ್ಲಿ ಇದನ್ನು ಮುದ್ರಿಸಿದ್ದರು. ನಮ್ಮ ಕ್ಷೇತ್ರದಲ್ಲಿ ಏನೆಂದರೆ, ಸುಮಾರು 385 ಹುದ್ದೆಗಳು ಖಾಲಿ ಇದೆ. ಅಲ್ಲಿ ಉಳಿದವರು ಯಾರು ಎಂಬುದು ನಮಗೆ ಚಿಂತೆ ಆಗಿದೆ. ಒಂದು ತಾಲ್ಲೂಕಿನಲ್ಲಿ 385 ಹುದ್ದೆಗಳು ಖಾಲಿ ಇವೆ ಎಂದರೆ ನಾವು ಆ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪ್ರಾಥಮಿಕ ಶಾಲಾ ಶಿಕ್ಷಕರ 75 ಹುದ್ದೆಗಳು ಖಾಲಿ ಇವೆ, ಸರ್ಕಾರಿ ಪ್ರೌಢಶಾಲೆಯಲ್ಲಿ 38 ಹುದ್ದೆಗಳು ಖಾಲಿ ಇವೆ, ಬಿಇಒ ಆಫೀಸ್‌ನಲ್ಲಿ 3 ಹುದ್ದೆಗಳು ಖಾಲಿ ಇವೆ, ಬಾಲಕ–ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ 9 ಹುದ್ದೆಗಳು ಖಾಲಿ ಇವೆ, ಪ್ರಥಮ ದರ್ಜೆ ಕಾಲೇಜಿನಲ್ಲಿ 9 ಹುದ್ದೆಗಳು ಖಾಲಿ ಇವೆ, ಕೃಷಿ ಇಲಾಖೆಯಲ್ಲಿ 28 ಹುದ್ದೆಗಳು, ಸಮಾಜ ಕಲ್ಯಾಣ ಇಲಾಖೆಯಲ್ಲಿ 48 ಹುದ್ದೆಗಳು, ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಒಂದು ಹುದ್ದೆ ಖಾಲಿ ಇದೆ. ರೇಷ್ಮೆ ಇಲಾಖೆಯಲ್ಲಿ 4 ಹುದ್ದೆಗಳು ಖಾಲಿ ಇವೆ, ತೋಟಗಾರಿಕೆ ಇಲಾಖೆಯಲ್ಲಿ 3 ಹುದ್ದೆಗಳು ಖಾಲಿ ಇವೆ, ಶಿಶುಪಾಲನಾ ಅಭಿವೃದ್ಧಿ ಯೋಜನೆಯ ಇಲಾಖೆಯಲ್ಲಿ 4 ಹುದ್ದೆಗಳು, ಪಶುಸಂಗೋಪನಾ ಮತ್ತು ವೈದ್ಯಕೀಯ ಇಲಾಖೆಯಲ್ಲಿ 23 ಹುದ್ದೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 93 ಹುದ್ದೆಗಳು, ದೇವದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ 10 ಹುದ್ದೆಗಳು ಖಾಲಿ ಇವೆ, ತಹಶೀಲ್ದಾರರ ಕಛೇರಿಯಲ್ಲಿ 13 ಹುದ್ದೆಗಳು ಖಾಲಿ ಇವೆ.